ಶ್ರೀರಾಮಕೃಷ್ಣರು ಜೀವನ ದುಃಖಮಯ ಎಂದು ಅದನ್ನು ತಿರಸ್ಕರಿಸಲಿಲ್ಲ. ಜೀವನದ ದುಃಖ ಅವರನ್ನು ಭಗವಂತನ ಕಡೆ ತಳ್ಳಲಿಲ್ಲ. ಒಂದು ಬಡ ಕುಟುಂಬದಿಂದ ಬಂದಿದ್ದರೂ ಚಿಕ್ಕಂದಿನಿಂದಲೂ ಅವರು ಸಂತೋಷದಿಂದಲೇ ಇರುತ್ತಿದ್ದರು, ಜಡಭರತನಂತೆ ಇರುತ್ತಿರಲಿಲ್ಲ. ಅವರು ನಗುತ್ತಿದ್ದರು, ನಗಿಸುತ್ತಿದ್ದರು, ಸ್ನೇಹಿತರೊಡನೆ ಆಟವಾಡುತ್ತಿದ್ದರು, ನಾಟಕ ಆಡುತ್ತಿದ್ದರು, ಹಾಡು ಹೇಳುತ್ತಾ ನರ್ತಿಸುತ್ತಿದ್ದರು. ಹೀಗೆ ಅವರು ಯಾವಾಗಲೂ ಕ್ರಿಯಾಶೀಲರೂ ಆನಂದಭರಿತರೂ ಆಗಿರುತ್ತಿದ್ದರು. ಶ್ರೀರಾಮಕೃಷ್ಣರು ಜೀವನ ದುಃಖಮಯವೆಂದು ದೇವರನ್ನು ಅರಸಿಕೊಂಡು ಹೋಗಲಿಲ್ಲ. ಅವರು ಜೀವನವನ್ನೂ ಅನುಭವಿಸಿದರು, ದೇವರನ್ನೂ ಅನುಭವಿಸಿದರು. ನಿಜವಾಗಿಯೂ ಅವರ ಪಾಲಿಗೆ ಈ ಎರಡು ಅನುಭವಗಳು ಪ್ರತ್ಯೇಕವಾಗಿರಲಿಲ್ಲ. ಅವರಿಗೆ ಎಲ್ಲವೂ ಭಗವದಾನಂದವನ್ನೇ ನೀಡುತ್ತಿದ್ದವು. ಈ ದೃಷ್ಟಿಯಿಂದ ನೋಡಿದರೆ ಶ್ರೀರಾಮಕೃಷ್ಣರು ಉಪನಿಷದ್ಭಾವದ ಜೀವಂತ ಪ್ರತಿನಿಧಿಯಾಗಿದ್ದಾರೆ.

**೬. ಶ್ರೀರಾಮಕೃಷ್ಣರ ಸಮನ್ವಯ ಭಾವ :** ವೇದದಲ್ಲಿ ಉಕ್ತವಾಗಿರುವ **"ಏಕಂ ಸದ್ವಿಪ್ರಾ ಬಹುಧಾ ವದಂತಿ"** ಎಂಬ ಸಮನ್ವಯ ಭಾವವನ್ನು ಭಗವದ್ಗೀತೆಯಲ್ಲಿಯೂ ಮುಂದಿನ ಸಂತ ಮಹನೀಯರಲ್ಲಿಯೂ ನಾವು ಕಾಣುತ್ತೇವೆ. ನೈಯಾಯಿಕ ಉದಯನ ವಾಣಿಯಿದು:

**ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ**
**ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ।**
**ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ**
**ಸೋಽಯಂ ವೋ ವಿದಧಾತು ವಾಂಛಿತಫಲಂ ತ್ರೈಲೋಕ್ಯನಾಥೋ ಹರಿಃ॥**

"ಯಾರು ವೇದಾಂತಿಗಳ ಬ್ರಹ್ಮನೊ, ನೈಯಾಯಿಕರ ಈಶ್ವರನೊ, ಸಾಂಖ್ಯರ ಪುರುಷನೊ, ಮೀಮಾಂಸಕರ ಕಾರಣನೊ, ಬೌದ್ಧರ ನಿಯಮವೊ, ನಾಸ್ತಿಕರ ಶೂನ್ಯನೊ ಹಾಗೂ ಭಕ್ತರ ಅನಂತ ಪ್ರೇಮಸ್ವರೂಪನೊ ಅವನು ತನ್ನ ಕರುಣಾಕಟಾಕ್ಷದಿಂದ ಬಯಕೆಗಳನ್ನು ಈಡೇರಿಸಲಿ."

ಶ್ರೀರಾಮಕೃಷ್ಣರು ತಮ್ಮ ಅನುಭವದ ಮೂಲಕ ಇದೇ ಸಂದೇಶವನ್ನು ನೀಡುತ್ತಾರೆ: "ವೇದಗಳಲ್ಲಿ, ಪುರಾಣಗಳಲ್ಲಿ ಮತ್ತು ತಂತ್ರಗಳಲ್ಲಿ ಒಂದೇ ಸಚ್ಚಿದಾನಂದ ಸತ್ಯವನ್ನು ಹೇಳಲಾಗಿದೆ. ವೇದಗಳಲ್ಲಿ ಅದನ್ನು 'ಬ್ರಹ್ಮ' ಎಂದು ಕರೆಯಲಾಗಿದೆ, ಪುರಾಣಗಳಲ್ಲಿ 'ಕೃಷ್ಣ', 'ರಾಮ' ಮುಂತಾದ ಹೆಸರುಗಳಿಂದ ಅದನ್ನು ಕರೆಯಲಾಗಿದೆ ಮತ್ತು ತಂತ್ರಗಳು ಅದನ್ನೇ 'ಶಿವ' ಎಂದು ಕರೆಯುತ್ತವೆ. ಒಂದೇ ಸಚ್ಚಿದಾನಂದವನ್ನೇ ಬ್ರಹ್ಮ, ಕೃಷ್ಣ ಮತ್ತು ಶಿವ ಎಂದು ಕರೆದಿರುವುದು." ಅವರೇ ಇನ್ನೊಂದು ಕಡೆ ಹೇಳುತ್ತಾರೆ: "ಎಲ್ಲ ಧರ್ಮಗಳ, ಎಲ್ಲ ಮತಗಳ ಅನುಯಾಯಿಗಳೂ ಪ್ರಾರ್ಥಿಸುವ ದೇವರು ಒಬ್ಬನೇ. ಆದ್ದರಿಂದ ಯಾವುದೇ ಧರ್ಮವನ್ನೂ, ಧಾರ್ಮಿಕ ಅಭಿಪ್ರಾಯವನ್ನೂ ಅಗೌರವದಿಂದ ಕಾಣಬಾರದು. ಒಂದೇ ದೇವರನ್ನೇ ವೇದಗಳಲ್ಲಿ ಸಚ್ಚಿದಾನಂದ ಬ್ರಹ್ಮವೆಂದೂ, ಪುರಾಣಗಳಲ್ಲಿ ಸಚ್ಚಿದಾನಂದ ಕೃಷ್ಣನೆಂದೂ, ತಂತ್ರಗಳಲ್ಲಿ ಸಚ್ಚಿದಾನಂದ ಶಿವನೆಂದೂ ಕರೆಯುತ್ತಾರೆ."

"ನಾನು ಸಕ್ಕರೆಯಾಗಲು ಬಯಸುವುದಿಲ್ಲ, ಸಕ್ಕರೆಯನ್ನು ಸವಿಯಲು ಬಯಸುತ್ತೇನೆ" ಎಂದು ಶ್ರೀರಾಮಕೃಷ್ಣರು ಹೇಳಿದರು. ಅವರು ಸಕ್ಕರೆಯೇ ಆಗಿಬಿಟ್ಟಿದ್ದರೆ ಶ್ರೀರಾಮಕೃಷ್ಣರೆಂಬ ಸಕ್ಕರೆ ನಮಗೆ ಬಹುಶಃ ದೊರೆಯುತ್ತಿರಲಿಲ್ಲ. ಶ್ರೀರಾಮಕೃಷ್ಣರ ಈ ಮೇಲಿನ ಹೇಳಿಕೆ ಮಧುಸೂದನ ಸರಸ್ವತಿಯವರ ಈ ಕೆಳಗಿನ ಮಾತನ್ನು ನೆನಪಿಸುತ್ತದೆ:

**ದ್ವೈತಂ ಮೋಹಾಯ ಬೋಧಾತ್ ಪ್ರಾಕ್ ಪ್ರಾಪ್ತೇ ಬೋಧೇ ಮನೀಷಯಾ। ಭಕ್ತ್ಯರ್ಥಂ ಕಲ್ಪಿತಂ ದ್ವೈತಂ ಅದ್ವೈತಾದಪಿ ಸುಂದರಮ್॥**

"ಜ್ಞಾನಕ್ಕೆ ಮುಂಚೆ ದ್ವೈತವು ಮೋಹಕಾರಿ. ಸಾಧನೆಯ ಮೂಲಕ ಜ್ಞಾನವನ್ನು ಪಡೆದಮೇಲೆ, ಭಕ್ತಿಗಾಗಿ ಉಳಿಸಿಕೊಂಡ ದ್ವೈತವು ಅದ್ವೈತಕ್ಕಿಂತಲೂ ಸುಂದರವಾದುದು."

ಶ್ರೀರಾಮಕೃಷ್ಣರು ಭಾಗವತವನ್ನು, ಜ್ಞಾನಾಗ್ನಿಯಲ್ಲಿ ಬೇಯಿಸಿ, ಭಕ್ತಿಯ ಸಕ್ಕರೆ ಪಾಕದಲ್ಲಿ ಅದ್ದಿದ ಜಿಲೇಬಿ ಎಂದು ಕರೆಯುತ್ತಿದ್ದರು. ಭಾಗವತ ಧರ್ಮದ ಪ್ರತಿನಿಧಿಯಾದ ಶ್ರೀರಾಮಕೃಷ್ಣರೂ ಒಂದು ಅಪರೂಪದ ಜಿಲೇಬಿ. ವೇದ, ವೇದಾಂತ, ಭಾಗವತ – ಎಲ್ಲ ಶಾಸ್ತ್ರಗಳನ್ನೂ ಪ್ರತಿಬಿಂಬಿಸುವ ಅಪೂರ್ವ ಜೀವನ ಅವರದು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಭರತಖಂಡದ ಕಳೆದ ಎಲ್ಲ ಧರ್ಮಸಿದ್ಧಾಂತಗಳೂ ಅವರಲ್ಲಿ ಮೂರ್ತಗೊಂಡಿದ್ದವು. ಶಾಸ್ತ್ರವೆಂದರೆ ಏನು ಎಂಬುದನ್ನೂ, ಅವುಗಳ ಯೋಜನೆ ಮತ್ತು ಉದ್ದೇಶಗಳನ್ನೂ ಅವರ ಜೀವನದ ಬೆಳಕಿನಿಂದಲೇ ತಿಳಿದುಕೊಳ್ಳಲು ನನಗೆ ಸಾಧ್ಯವಾಯಿತು."

ಶ್ರೀರಾಮಕೃಷ್ಣರು ಶಾಸ್ತ್ರಕ್ಕೆ ಒಂದು ಬೆಳಕಾದರು. ಶಾಸ್ತ್ರವೇ ಅವರಿಂದ ಪುಷ್ಟಿ ಪಡೆಯುವಂತಾಯಿತು. ಅಷ್ಟೇ ಅಲ್ಲದೆ ಅವರ ಜೀವನ ಮತ್ತು ಅನುಭವ ಶಾಸ್ತ್ರಗಳನ್ನು ಮೀರಿಹೋಗಿರುವುದೆಂದು ಅವರ ಸಮಕಾಲೀನ ಪಂಡಿತರು ಅಭಿಪ್ರಾಯಪಡುತ್ತಿದ್ದರು. ಅವರ ಜೀವನ ಮತ್ತು ಉಪದೇಶಗಳು ಒಂದು ಆಧುನಿಕ ಶಾಸ್ತ್ರವಾಗಿ ಅಸಂಖ್ಯ ಜನರಿಗೆ ಮಾರ್ಗದರ್ಶನ, ಸ್ಫೂರ್ತಿ ನೀಡುತ್ತಿವೆ. ಅವರ ಈ ಶಾಸ್ತ್ರದ ಬೆಳಕಿನಲ್ಲಿ ನಮ್ಮ ಜೀವನವನ್ನು ರೂಪಿಸಿಕೊಳ್ಳಲು ಪ್ರಯತ್ನಿಸೋಣ.


# ಉಪಾಸನಾ ರೂಪದಲ್ಲಿ ಶ್ರೀರಾಮಕೃಷ್ಣರ ಉಪದೇಶ

ಸ್ವಾಮಿ ಸುನಿರ್ಮಲಾನಂದ

ಶ್ರೀರಾಮಕೃಷ್ಣರ ಉಪದೇಶಗಳಲ್ಲಿ ಸೂತ್ರಪ್ರಾಯದ ಅನೇಕ ಬೋಧನೆಗಳಿವೆ. ಅವು ಉಪನಿಷತ್ತಿನಲ್ಲಿ ಹೇಳಿರುವ ಉಪಾಸನೆಗಳಿಗೆ ಸಮಾನವಾದುವು. ಅವುಗಳ ಚಿಂತನ, ಮನನದಿಂದ ಆಧ್ಯಾತ್ಮಿಕ ಉನ್ನತಿ ಸಾಧ್ಯ. ಈ ಅಂಶವನ್ನು ಸೋದಾಹರಣವಾಗಿ, ತರ್ಕಬದ್ಧವಾಗಿ ಪರಿಚಯಿಸಿರುವ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಇಂಗ್ಲಿಷ್ ಪತ್ರಿಕೆ 'ಪ್ರಬುದ್ಧಭಾರತ'ದ ಸಂಪಾದಕರಾಗಿದ್ದವರು. ಇವರು ಬಂಗಾಳಿ, ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ನುರಿತವರು. ಅನೇಕ ಪುಸ್ತಕಗಳ ಅನುವಾದ ಮಾಡಿದ್ದಾರೆ; ಹಲವಾರು ಲೇಖನಗಳನ್ನು ಬರೆದಿದ್ದಾರೆ.

## ಅವತಾರ ಮತ್ತು ನಾವು

ಸಹಸ್ರಾರು ವರ್ಷಗಳಿಂದ ಶ್ರೀರಾಮ, ಶ್ರೀಕೃಷ್ಣ ಇತ್ಯಾದಿ ಅವತಾರಗಳನ್ನು ನಾವು ಆರಾಧಿಸುತ್ತಿದ್ದೇವೆ. ಅವರು ನೋಡಲು ನಮ್ಮಂತೆಯೇ ಇದ್ದರು. ನಮ್ಮಂತೆಯೇ ಅವರಿಗೂ ದುಃಖ, ಕಷ್ಟ, ರೋಗ, ರುಜಿನಗಳಿದ್ದವು. ಆದರೂ ಅದೇಕೆ ನಾವು ಅವರನ್ನು ಶ್ರದ್ಧೆಯಿಂದ ಆರಾಧಿಸುವುದು? ಅವತಾರಗಳು ನೋಡಲು ನಮ್ಮಂತೆಯೇ ಇರಬಹುದು; ಆದರೆ ಅವರ ಚರಿತ್ರೆಯೇ ಬೇರೆ, ನಮ್ಮ ಚರಿತ್ರೆಯೇ ಬೇರೆ. ಒಂದು ಆಧುನಿಕ ಉದಾಹರಣೆ ಈ ವಿಷಯವನ್ನು ಸ್ಪಷ್ಟಪಡಿಸುತ್ತದೆ. ದೇಶದ ರಾಷ್ಟ್ರಪತಿಗೆ, ಮೈಸೂರು ನಗರದ ಸರ್ಕಾರಿ ಬಸ್ ಹೇಗೆ ಕೆಲಸ ಮಾಡುತ್ತಿದೆ ಎಂದು ನೋಡುವ ಇಚ್ಛೆಯಾದರೆ, ಅವರು ಯಾವುದಾದರೊಂದು ಬಸ್ಸಿನಲ್ಲಿ ಗುಟ್ಟಾಗಿ ಪ್ರಯಾಣ ಮಾಡುತ್ತಾರೆ. ಬಸ್ಸಿನಲ್ಲಿ ಬಹಳ ಜನರಿದ್ದರೆ ಕುಳಿತುಕೊಳ್ಳಲು ಅವರಿಗೆ ಸ್ಥಾನ ಸಿಗುವುದಿಲ್ಲ. ಜನರು ತಳ್ಳಿದರೆ ತಳ್ಳಬಹುದು ಅಥವಾ ಬಸ್ಸಿನ ಚಾಲಕ ಹಠಾತ್ತಾಗಿ ಬ್ರೇಕ್ ಹಾಕಿದರೆ ಆಘಾತವೂ ಆಗಬಹುದು. ಕಂಡಕ್ಟರ್‌ನಿಂದ ಅವರಿಗೂ ಟಿಕೇಟ್ ಕೊಂಡುಕೊಳ್ಳಬೇಕೆಂಬ ತಾಕೀತು ಬರಬಹುದು. ಯಾರಾದರೂ ತಳ್ಳಿದಾಗ, "ತಳ್ಳಬೇಡಿ, ನಾನು ರಾಷ್ಟ್ರಪತಿ" ಎಂದರೆ ಆ ವ್ಯಕ್ತಿ, "ನೀವು ರಾಷ್ಟ್ರಪತಿ ಆದರೆ ನಾನು ನೆಪೋಲಿಯನ್" ಎಂದು ವ್ಯಂಗ್ಯ ಉತ್ತರ ನೀಡಬಹುದು. ಆದರೆ ಒಂದೇ ಒಂದು ದೊಡ್ಡ ವ್ಯತ್ಯಾಸ. ರಾಷ್ಟ್ರಪತಿಗಳು ಯಾವಾಗ ಬೇಕಾದರೂ ಬಸ್ಸಿನಿಂದ ಇಳಿದು, ತಮಗಾಗಿ ಕಾದಿರುವ ಹಲವಾರು ಕಾರುಗಳಲ್ಲಿ ಒಂದನ್ನು ಆರಿಸಿಕೊಂಡು, ಅದರಲ್ಲಿ ಕುಳಿತು, ಮುಂದೆ ಪ್ರಯಾಣ ಮಾಡಬಹುದು; ತಮ್ಮ ಸಹಚರರಿಗೆ ಬಸ್ಸಿನಲ್ಲಾದ ತಮಾಷೆಯ ಬಗ್ಗೆ ಕಥೆ ಹೇಳಿ ನಗಬಹುದು. ಆದರೆ ಅದೇ ಬಸ್ಸಿನಲ್ಲಿ ಪ್ರಯಾಣ ಮಾಡುವ ಇತರರಿಗೆ ಆ ಸೌಲಭ್ಯವಿಲ್ಲ. ಅವರು ವಿಧಿ ಇಲ್ಲದೇ ಆ ಬಸ್ಸಿನಲ್ಲಿಯೇ ಪ್ರಯಾಣ ಮಾಡಬೇಕು – ಸೀಟು ಸಿಗಲಿ, ಏಟು ಸಿಗಲಿ, ಅವರಿಗೆ ಬೇರೆ ದಾರಿಯೇ ಇಲ್ಲ.



ಇದೇ ನಮಗೂ, ಅವತಾರಗಳಿಗೂ ಇರುವ ಅಂತರ. **'ಜನ್ಮ ಕರ್ಮ ಚ ಮೇ ದಿವ್ಯಂ'** – "ನನ್ನ ಜನ್ಮ ಮತ್ತು ಕರ್ಮ ದಿವ್ಯವಾದುದು" ಎಂದು ಶ್ರೀಕೃಷ್ಣ ಹೇಳುತ್ತಾನೆ. ನಾವು ಸಾಧಾರಣಜೀವಿಗಳು. ನಮ್ಮ ಕರ್ಮಗಳಿಗೆ ಅನುಗುಣವಾಗಿ ಜನ್ಮ ತಾಳುತ್ತೇವೆ. ನಮ್ಮ ಕೆಲಸಕಾರ್ಯಗಳು, ಜೀವನ, ಹುಟ್ಟು, ಸಾವು – ಇವೆಲ್ಲವೂ ಕರ್ಮವನ್ನು ಅನುಸರಿಸುತ್ತವೆ. ಆದರೆ ಅವತಾರಗಳ ಜೀವನ ಹಾಗಲ್ಲ. ಅವರ ಜೀವನವು ಕರ್ಮವನ್ನು ಅನುಸರಿಸಿ ನಡೆಯುವುದಿಲ್ಲ ಮತ್ತು ಅವರ ಜನ್ಮವೂ ಕೂಡ ಕರ್ಮಕ್ಕೆ ಅನುಗುಣವಾಗಿ ಇರುವುದಿಲ್ಲ. ಇದಕ್ಕೆ ಕಾರಣ ಅತ್ಯಂತ ಸಹಜ; ಅವರಲ್ಲಿ ಕರ್ಮಲೇಶವಿಲ್ಲ. ಇದರ ಅರ್ಥ ಹೀಗೆ: ನಾವು ಮತ್ತು ರಾಮ, ಕೃಷ್ಣ ಇತ್ಯಾದಿ ಅವತಾರಗಳೂ ನೋಡಲು ಒಂದೇ ರೀತಿ ಕಂಡರೂ, ನಮ್ಮ ನಡುವಿನ ಅಂತರ ಆಕಾಶ ಪಾತಾಳದ ಹಾಗೆ ಇರುತ್ತದೆ. ನಾವು ನಮ್ಮ ಕರ್ಮದ ಪರಿಣಾಮವಾಗಿ ವಿಧಿಯಿಲ್ಲದೆ ಜನ್ಮ ತಾಳುತ್ತೇವೆ; ವಿಧಿಯಿಲ್ಲದೆ ದುಃಖವನ್ನೇ ಸುಖವೆಂದು ಭಾವಿಸಿ ಮನಸ್ಸಿಗೆ ಸಮಾಧಾನ ಹೇಳಿಕೊಳ್ಳುತ್ತೇವೆ; ವಿಧಿಯಿಲ್ಲದೆ ದುಃಖದ ಸಮುದ್ರದಲ್ಲಿ ಮುಳುಗಿ ತೇಲುತ್ತೇವೆ ಮತ್ತು ವಿಧಿಯಿಲ್ಲದೆ ಅಸು ನೀಗುತ್ತೇವೆ. ನಮ್ಮ ಪರಿಸ್ಥಿತಿ "ಕುರಿಗಳು ಸಾರ್, ಕುರಿಗಳು, ಆಗಿದ್ದೇ ಗುರಿಗಳು" ಎಂಬಂತೆ ಇರುತ್ತದೆ. ಹಾಗಾದರೆ ನಾವು 'ನಮ್ಮ ಕರ್ಮಫಲ' ಎಂಬ ಕುರುಬನ ಕೈಗಳಲ್ಲಿ ಸಿಕ್ಕಿ ಬಳಲುವ ಕುರಿಗಳು ಮಾತ್ರವೇ? ಹೌದು. ನಾವು ಅದೆಷ್ಟೇ ಜೋರಾಗಿ "ನಾವು ಸ್ವತಂತ್ರರು! ನಾವು ಇಂಡಿಪೆಂಡೆಂಟ್" ಎಂದು ಅರಚಿದರೂ ಸ್ವತಂತ್ರರಲ್ಲವೇ ಅಲ್ಲ. ಆದರೆ ನಮಗೆ ಒಂದೇ ಒಂದು ಸ್ವಾತಂತ್ರ್ಯ ಇದೆ. ಅಂದರೆ, ಮುಂದಿನ ಜೀವನವನ್ನು ಚೆನ್ನಾಗಿ ಇರುವಂತೆ ಮಾಡಲು ಅವಶ್ಯಕವಾದ ಕರ್ಮಗಳ ಸಂಗ್ರಹ ಚೆನ್ನಾಗಿರುವಂತೆ ನೋಡಿಕೊಳ್ಳುವ ಸ್ವಾತಂತ್ರ್ಯ ಮಾತ್ರ ನಮ್ಮ ಕೈಯಲ್ಲಿದೆ. ಅಂದರೆ, ಭವಿಷ್ಯದಲ್ಲಿ ಕುರುಬನನ್ನು ಆರಿಸಿಕೊಳ್ಳುವ ಒಂದೇ ಒಂದು ಶಕ್ತಿ ಮಾತ್ರ ನಮ್ಮಂತಹ ಕುರಿಗಳಿಗೆ ಇದೆ. ಇದೇ ಸತ್ಕರ್ಮ ಮಾಡುವ ಶಕ್ತಿ. ಇದು ಪ್ರಾಣಿಗಳಿಗಿಲ್ಲ,

ನಮಗಿದೆ. ನಾವು ಈ ಕ್ಷಣದಿಂದ ನಮ್ಮ ಭವಿಷ್ಯತ್ತನ್ನು ಬದಲಾಯಿಸಿಕೊಳ್ಳಬಲ್ಲೆವು. ಶ್ರೀರಾಮಕೃಷ್ಣರು ಹೇಳುತ್ತಾರೆ, "ಯೋಗಾಸನ ಮಾಡಬೇಕಿಲ್ಲ, ಭಕ್ತಿಯಿಂದ ಎಲ್ಲವೂ ಸಿಗುತ್ತದೆ" ಎಂದು. ಹಾಗೆಂದರೇನು? "ಈ ಕ್ಷಣದಿಂದ ನಾವು ಇತರರಿಗಾಗಿ ಬದುಕೋಣ" ಎಂದು ನಿರ್ಧರಿಸಿದರೆ ಮರುಕ್ಷಣವೇ ನಮ್ಮ ಜೀವನ ಬದಲಾಗುತ್ತದೆ. ಮುಂದಿನ ಅನೇಕ ದಿನಗಳಲ್ಲಿ, ಜನ್ಮಗಳಲ್ಲಿ ಬರಬಹುದಾದ ಬಹಳಷ್ಟು ರೋಗ, ಶೋಕಗಳನ್ನು ಅದು ಸಂಪೂರ್ಣವಾಗಿ ಹೊರಗಟ್ಟಬಲ್ಲದು. ಅದಕ್ಕಾಗಿ ಮಾಡಬೇಕಾದ್ದು ಒಂದೇ ಒಂದು ಕೆಲಸ. ಅದು ಸತ್ಕರ್ಮ. ಜಪ, ಧ್ಯಾನ, ಪೂಜೆ, ಆರಾಧನೆ, ಸೇವೆ, ಅಧ್ಯಯನ, ಇತರರಿಗೆ ಸಹಾಯ ಮಾಡುವುದು, ಸಚ್ಚಿಂತನೆ ಮಾಡುವುದು, ಎಲ್ಲರಿಗಾಗಿ ಪ್ರಾರ್ಥನೆ ಮಾಡುವುದು, ಅಸೂಯೆ ಪಡದಿರುವುದು – ಇವೆಲ್ಲವೂ ಸತ್ಕರ್ಮ ಅನ್ನಿಸಿಕೊಳ್ಳುತ್ತದೆ.

ಕೊನೆಯ ಮಾತು ಇದೆಯಲ್ಲ – ಅಸೂಯೆಪಡಬಾರದು ಎಂಬುದು – ಅದು ಬಹಳ ಮುಖ್ಯ. ಅಸೂಯೆ ಅಪ್ರಯೋಜಕವಾದುದು. ಇತರರನ್ನು ನೋಡಿ ಅಸೂಯೆಪಡುವುದು ವ್ಯರ್ಥ, ಹಾಸ್ಯಕರ. ಏಕೆ ಎನ್ನುವಿರೋ? ಪ್ರತಿಯೊಬ್ಬರೂ – ಕ್ರಿಮಿಯಿಂದ ಹಿಡಿದು ಒಬಾಮಾರವರೆಗೂ – ತಮ್ಮ ತಮ್ಮ ಕರ್ಮಕ್ಕೆ ಅನುಗುಣವಾಗಿ ಮೇಲೆ ಬರುತ್ತಾರೆ, ಕೆಳಗೆ ಹೋಗುತ್ತಾರೆ. ರಾತ್ರಿ ಊಟ ಮಾಡುವಾಗ ದೊಡ್ಡ ದೊಡ್ಡ ಹತ್ತು ಹಸಿ ಮೆಣಸಿನಕಾಯಿಗಳನ್ನು ತಿಂದು, ಅನಂತರ ಬಾಯಲ್ಲಿ ಉರಿ, ಹೊಟ್ಟೆಯಲ್ಲಿ ಬೆಂಕಿ ಎಂದು ಅಳುತ್ತಾ, ಇತರರು ನಿಶ್ಚಿಂತೆಯಿಂದ ನಿದ್ರೆ ಮಾಡುತ್ತಿರುವುದನ್ನು ಕಂಡು, ಅವರ ಮೇಲೆ ಅಸೂಯೆಪಟ್ಟರೆ ಅದರಿಂದ ಏನು ತಾನೇ ಲಾಭ? "ದೇವರು ಬಹಳ ಪಕ್ಷಪಾತಿ – ಅವರಿಗೆ ನಿದ್ರೆ ಕೊಡುತ್ತಾನೆ, ನನಗೆ ಹೊಟ್ಟೆಯಲ್ಲಿ ಬೆಂಕಿ ಹಚ್ಚುತ್ತಾನೆ" ಎಂದು ದೇವರನ್ನು ಬೈದರೂ ಅದರಿಂದ ಲಾಭವಿಲ್ಲ. ಹಾಗಾಗಿ, ಕರ್ಮಸಿದ್ಧಾಂತ ಹತಾಶಾವಾದವೂ ಅಲ್ಲ, ನಿರಾಶಾವಾದವೂ ಅಲ್ಲ. ನಮ್ಮ ಜೀವನ ನಮ್ಮ ಕೈಯಲ್ಲಿದೆ. ಹೊಟ್ಟೆಕಿಚ್ಚು, ಅಸೂಯೆ, ಭಗವಂತನ ಮೇಲೆ ಕೋಪ – ಇವೆಲ್ಲವೂ ವ್ಯರ್ಥ, ಹಾನಿಕಾರಕ. ನಮ್ಮ ಕಪಾಲಕ್ಕೆ ನಾವೇ ಏಟು ಕೊಟ್ಟುಕೊಂಡ ಹಾಗೆ. ನಮ್ಮ ಜನ್ಮ, ಜೀವನ, ಮೃತ್ಯು – ಎಲ್ಲವೂ ನಮ್ಮ ಕರ್ಮಾನುಸಾರ ಎಂದು ಅರ್ಥ ಮಾಡಿಕೊಂಡಾಗ ಮಾತ್ರ ನಮಗೆ ಶಾಂತಿ.

### ಅವತಾರದ ಜೀವನ

ಈ ಲೋಕದ ಜನರ ಕರ್ಮಗಳ ಪ್ರಾಬಲ್ಯ ಹೆಚ್ಚಾದಾಗ, ಹೆಚ್ಚಿನವರು ಹಿಟ್ಲರನ ಸೈನ್ಯವೇ ಆಗಿ ಪಾಪಮಗ್ನರಾದಾಗ, ಈ ಜಗತ್ತನ್ನೇ ಸರ್ವಸ್ವ ಎಂದು ಭಾವಿಸಿ ಅದರಲ್ಲಿಯೇ ಸುಖವನ್ನು ಹುಡುಕಲು ಆತುರ ತೋರಿದಾಗ, ಈ ಜಗತ್ತಿನ ಭಾರ ಹೆಚ್ಚಾಗುತ್ತದೆ. ಆಗ ಭಗವಂತ ಅವತಾರ ತಾಳುತ್ತಾನೆ. ಸ್ವೇಚ್ಛೆಯಿಂದ, ಲೋಕದ ಕರ್ಮಭಾರವನ್ನು ಕಡಿಮೆ ಮಾಡಲೆಂದೇ ಅವನು ಹುಟ್ಟಿಬರುತ್ತಾನೆ. ಈ ಅವತರಣ ವೈಜ್ಞಾನಿಕ ಯುಗ, ಶಿಲಾಯುಗ ಮುಂತಾದ ನಮ್ಮ ಮಿದುಳಿನ ಪ್ರಭೇದಗಳನ್ನು ಲಕ್ಷ್ಯ ಮಾಡುವುದೇ ಇಲ್ಲ. ಇರುವೆಗಳು ಹೊಸದಾಗಿ ಒಂದು ವೈಜ್ಞಾನಿಕ ಟೆಲಿಸ್ಕೋಪ್ ತಯಾರಿಸಿ, ಆನೆ ಆ ದಾರಿಯಲ್ಲಿ ಬರುವುದೋ ಇಲ್ಲವೋ ಎಂದು ಎದುರು ನೋಡುತ್ತಿದ್ದವಂತೆ. ಟೆಲಿಸ್ಕೋಪ್ ತಯಾರಿಸಿದ ವಿಜ್ಞಾನಿ ಇರುವೆ ಸಂದರ್ಶನದಲ್ಲಿ ಹೇಳುತ್ತಿತ್ತಂತೆ, "ಆನೆ, ಆನೆಯ ತುಳಿತ, ಪರ್ವತದಂತಹ ಅದರ ಶರೀರ – ಇವೆಲ್ಲ ಮೂಢನಂಬಿಕೆ. ನಮ್ಮ ಪ್ರಾಚೀನ ಜನಾಂಗ ಮೂರ್ಖಜನಾಂಗ. ಈಗ ನಾವು ವೈಜ್ಞಾನಿಕವಾಗಿ ಅತ್ಯಂತ ಪ್ರಗತಿ ಹೊಂದಿದ್ದೇವೆ. ಇನ್ನು ಈ ಮೂಢನಂಬಿಕೆಗಳನ್ನು ಬಿಡಬೇಕು" ಎಂದು. ಈ ಸಂದರ್ಶನದ ಭರಾಟೆ ಮುಗಿಯುವುದಕ್ಕೆ ಮೊದಲೇ ಭಾರಿ ಅನಾಹುತ ಆಗಿಹೋಯಿತು. ಆನೆಯ ತುಳಿತದಿಂದ ಟೆಲಿಸ್ಕೋಪ್ ಧೂಳಾಗಿ ಹೋಯಿತು.

**ಅವತಾರಾ ಅಸಂಖ್ಯೇಯಾಃ** ಎಂದು ಭಾಗವತ ಹೇಳುತ್ತದೆ. "ನಮ್ಮ ಶ್ರೀಕೃಷ್ಣನೇ ಕೊನೆಯ ಅವತಾರ; ಅನಂತರ ಯಾರೂ ಇಲ್ಲ; ಅವನು ಅವತಾರ ಬರುವ ಬಾಗಿಲನ್ನು ಮುಚ್ಚಿಕೊಂಡು ಹೋಗಿದ್ದಾನೆ" ಎಂಬ ಕೆಲವರ ಅಭಿಪ್ರಾಯಕ್ಕೆ ಭಾಗವತ ಮಾನ್ಯತೆ ನೀಡುವುದಿಲ್ಲ. ಅಜ್ಞಾನಿಗಳ ಹೊರತಾಗಿ ಇತರರೆಲ್ಲರಿಗೂ ತಿಳಿದಿರುವಂತೆ, ಈ ಜಗತ್ತು ಯಾವುದೋ ಒಂದು ನಿರ್ದಿಷ್ಟವಾದ ದಿನ ಉತ್ಪತ್ತಿಯಾದುದಲ್ಲ. ಈ ಜಗತ್ತು ಅನೇಕ ಪ್ರವಾದಿಗಳನ್ನೂ ಅವತಾರಗಳನ್ನೂ ನೋಡಿದೆ, ನೋಡಲಿದೆ. ನಾವೇ ಈ ಜಗತ್ತಿನ ಕೊನೆಯ ನಿವಾಸಿಗಳಲ್ಲ; ಈ ಪೃಥ್ವಿಯ ಎಲ್ಲ ಸಂಪತ್ತುಗಳನ್ನೂ ಕೇವಲ ನಮಗಾಗಿ ಸೃಷ್ಟಿಮಾಡಲಾಗಿಲ್ಲ; ನಾಳೆ ಕರೆಬಂದರೆ ನಮ್ಮ ಧನ ದೌಲತ್ತು ಎಲ್ಲವನ್ನೂ ಎಸೆದು ನಾವು ಓಡಬೇಕು. ಆದರೆ ಈ ಜಗತ್ತಿನ ನಿಯಮಗಳ ವಿಷಯ ಬೇರೆ. ಅವು ಅನಾದಿಕಾಲದಿಂದ ಅನಂತಕಾಲದವರೆಗೆ ಚಲಿಸುತ್ತಲೇ ಇರುತ್ತವೆ.

ಅವತರಣ ಮಾಡುವ ದೈವೀಶಕ್ತಿ ನಮ್ಮ ಹಾಗೆ ಕ್ಷುದ್ರ, ಕ್ಷುಲ್ಲಕ ನಿಯಮಗಳನ್ನು ಪಾಲಿಸಬೇಕಿಲ್ಲ. ಹಾಗಾಗಿಯೇ ಬುದ್ಧದೇವರ ಜನ್ಮಕ್ಕೆ ಮುನ್ನ ಅವರ ತಾಯಿ ಮಾಯಾದೇವಿ ಆನೆಯ ಸ್ವಪ್ನ ನೋಡಿದಳು. ರಾಮಚಂದ್ರನ ತಾಯಿ ಅಗ್ನಿದೇವತೆ ನೀಡಿದ ಪ್ರಸಾದವಾದ ಪಾಯಸವನ್ನು ಸ್ವೀಕರಿಸಿದಳು. ಕೃಷ್ಣನ ತಂದೆತಾಯಿಗಳಿಗೆ ಅವನ ಆಗಮನದ ವಾರ್ತೆ ಮುಂಚಿತವಾಗಿಯೇ ತಿಳಿದಿತ್ತು. ಶ್ರೀರಾಮಕೃಷ್ಣರ ತಾಯಿಗೆ ಶಿವಲಿಂಗದಿಂದ ಜ್ಯೋತಿ ಹೊರಬಂದು ತಮ್ಮ ಶರೀರ ಪ್ರವೇಶಿಸಿದ ಅನುಭವವಾಯಿತು. ಅವರ ತಂದೆಗೆ ಸ್ವತಃ ನಾರಾಯಣನೇ ಸ್ವಪ್ನದಲ್ಲಿ ಬಂದು, "ನಾನು ಅವತಾರ ಮಾಡುತ್ತೇನೆ" ಎಂದು ತಿಳಿಸಿದ. ಇದೆಲ್ಲವನ್ನೂ ಹೇಳುವುದರ ಕಾರಣವೇನು? ಶ್ರೀರಾಮಕೃಷ್ಣರು ಮತ್ತು ಶ್ರೀಕೃಷ್ಣ ಇಬ್ಬರೂ ನಮಗೆ ಹೀಗೆ ತಿಳಿಯಹೇಳುತ್ತಾರೆ: **'ಜನ್ಮ ಕರ್ಮ ಚ ಮೇ ದಿವ್ಯಂ'** – "ನಮ್ಮ ಜನ್ಮ ಭೌತಿಕವಲ್ಲ, ದಿವ್ಯ; ನಮ್ಮ ಕೆಲಸ ಕಾರ್ಯಗಳು ಭೌತಿಕವಲ್ಲ, ದಿವ್ಯ" ಎಂದು. ಈ ವಿಷಯದ ಬಗ್ಗೆ ಶ್ರೀರಾಮಕೃಷ್ಣರು, "ನಾನು ಯಾರು ಮತ್ತು ನನಗೂ ನಿನಗೂ ಇರುವ ಸಂಬಂಧವೇನು – ಇದನ್ನು ತಿಳಿದುಕೊಳ್ಳಬೇಕು" ಎನ್ನುತ್ತಾರೆ.

ಅವತಾರ ಧರೆಗಿಳಿಯುವ ವಿಧಾನ ವಿಚಿತ್ರವಾದುದು. ಹಾಗೆಯೇ ಅವರ ಕೆಲಸಕಾರ್ಯಗಳೂ ಅದ್ಭುತವಾದದ್ದು. ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಅವರ 'ಪವಾಡ'ಗಳನ್ನು ನೋಡಿ ಅವರ ಬಗ್ಗೆ ವಿಚಿತ್ರ ಕಲ್ಪನೆ ಮಾಡಿಕೊಳ್ಳುತ್ತೇವೆ. 'ಪವಾಡ' ಎನ್ನುವುದು ಯೋಗಿಗಳಿಂದಲೂ ಸಾಧ್ಯ. "ನಮ್ಮ ಗುರುಗಳು ಅವತಾರಕ್ಕಿಂತ ದೊಡ್ಡವರು, ಅವರು ನೀರನ್ನು ಪೆಟ್ರೋಲ್ ಮಾಡಬಲ್ಲರು" – ಇಂತಹ ಭಾವನೆ ಅಜ್ಞಾನಕಲ್ಪಿತವಾದದ್ದು. ಈ ರೀತಿಯ 'ಅವತಾರಗಳು' ದಿನದಿನಕ್ಕೂ ಹೆಚ್ಚುತ್ತಿವೆ ಮತ್ತು ಧರ್ಮಕ್ಕೆ ಕೆಟ್ಟ ಹೆಸರು ತರುತ್ತಿವೆ. ವಿದೇಶಗಳಲ್ಲಿ ಹಠಾತ್ತಾಗಿ ಯೇಸುವಿನ 'ಅವತಾರ'ಗಳನ್ನು ನೋಡಬಹುದು. ಇವೆಲ್ಲ ಅವತಾರಗಳ 'ದಿವ್ಯಕರ್ಮ'ಗಳಲ್ಲ. ನಮಗೆ ಪವಾಡ ದೊಡ್ಡದಾಗಿ ಕಾಣಬಹುದು. ಆದರೆ ದೇವರಿಗೆ ಅಂತಹ ಮೌಢ್ಯವಿಲ್ಲ. ದೇವರ ದೃಷ್ಟಿಯಲ್ಲಿ ಮಹಾನ್ ವಸ್ತು ಯಾವುದು? 'ನಾವು.' ಹಾಗಾದರೆ ಅವತಾರದ ದಿವ್ಯಕರ್ಮ ಎನ್ನುವುದು ಯಾವುದು?

### ಅವತಾರದ ಉಪದೇಶಗಳೇ ಜೀವನ

ಅವತಾರಗಳ ಉಪದೇಶ ಸಹಜಗಮ್ಯ, ಸರಳ. ಅವರ ಜೀವನದ ಪ್ರತಿಬಿಂಬ ಅವರ ಉಪದೇಶ. ಅವತಾರಗಳು ಅಸಂಖ್ಯ. ನಮಗೆ ಅತ್ಯಂತ ಸಮೀಪವಾದ ಅವತಾರ ಭಗವಾನ್ ಶ್ರೀರಾಮಕೃಷ್ಣರು. ಅವರ ಜೀವನ ಮತ್ತು ಸಂದೇಶಗಳಲ್ಲಿನ ಸರಳತೆ ಮತ್ತು ಗಾಂಭೀರ್ಯ ಎಲ್ಲರಿಗೂ ಗೊತ್ತಿರುವಂಥದ್ದೆ. ಅವರ ಉಪದೇಶಗಳಲ್ಲಿ ಒಂದು ಅದ್ಭುತ ಸತ್ಯವನ್ನು ಗಮನಿಸಬಹುದು. ಅದೆಂದರೆ, ಅತ್ಯಂತ ಸಾಧಾರಣ ವಸ್ತುವಿನಲ್ಲಿಯೂ ಅಸಾಧಾರಣವಾದುದನ್ನು ಕಂಡುಕೊಂಡು ಅದನ್ನು ಜಗತ್ತಿಗೆ ತಿಳಿಸುವುದು. ಈ ಲೇಖನದ ಪ್ರಾರಂಭದಲ್ಲಿ ಅವತಾರ ಹಾಗೂ ನಮ್ಮ ನಡುವೆ ಇರುವ ಅಂತರದ ಬಗ್ಗೆ ನೋಡಿದ್ದೇವೆ; ಅವರ ಮತ್ತು ನಮ್ಮ ಜನ್ಮಗಳ ನಡುವೆ ಇರುವ ವ್ಯತ್ಯಾಸವನ್ನು ಕಂಡುಕೊಂಡಿದ್ದೇವೆ. ಅವರ ಜೀವನಕ್ಕೂ ಮತ್ತು ನಮ್ಮ ಜೀವನಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಅವರು ಸಾಧಾರಣದಲ್ಲಿ ಅಸಾಧಾರಣವನ್ನು ನೋಡಿದರೆ, ನಾವು ಅಸಾಧಾರಣದಲ್ಲಿ ಸಾಧಾರಣವನ್ನು ನೋಡುತ್ತೇವೆ. ಶ್ರೀರಾಮಕೃಷ್ಣರು ಅತ್ಯಂತ ಕೆಳಸ್ತರದ ಜನರಲ್ಲಿಯೂ ಭಗವತಿಯನ್ನೇ ಕಾಣುತ್ತಿದ್ದರು; ಬೆಕ್ಕಿನಲ್ಲಿ ಬ್ರಹ್ಮಮಯಿಯ ದರ್ಶನ ಮಾಡುತ್ತಿದ್ದರು. ನಾವು? ನಾವು ಭಗವಂತನನ್ನೂ ತುಚ್ಛವಾಗಿ ನೋಡುತ್ತೇವೆ; ಸಂತರಲ್ಲಿಯೂ ಮೋಸಗಾರರನ್ನು ಕಾಣುವ ನಿಸ್ಸೀಮರು ನಾವು!

ವೇದಾಂತದ ಉಪದೇಶ, ಶ್ರೀರಾಮಕೃಷ್ಣ, ಶ್ರೀಶಾರದಾದೇವಿ ಮತ್ತು ವಿವೇಕಾನಂದರ ಉಪದೇಶ – ಇವೆಲ್ಲವೂ ಒಂದೇ ತೆರನಾಗಿದೆ. ಅದೆಂದರೆ, "ಅಣುವಿನಲ್ಲಿ ಮಹತ್ತನ್ನು ನೋಡಬೇಕು, ಕ್ರಿಮಿಯಲ್ಲಿ ಈಶ್ವರನನ್ನು ನೋಡಬೇಕು." ನಮ್ಮ ಸಂಕುಚಿತ, ಸಂಕೀರ್ಣ, ಮಲಿನ ದೃಷ್ಟಿ ಹೋಗಬೇಕು; ನಮ್ಮಲ್ಲಿ ಮಹಾನ್ ದೃಷ್ಟಿ ಬರಬೇಕು. ಅಂತಹ ದೃಷ್ಟಿಯಿಂದ ಲಾಭವೇನು? ಹಿಂದಿಯಲ್ಲಿ ಒಂದು ಮಾತಿದೆ: **'ಮೆಹೆಂದೀ ಲಾಗನ್ ಕೋ ಲಗ್ಯೆ, ಜೋ ಮೆಹೆಂದೀ ಕೀ ರಂಗ್!'** – "ಇತರರ ಕೈಗಳಿಗೆ ನಾವು ನಾನಾ ವಿನ್ಯಾಸದ ಮೆಹಂದಿ ಹಾಕುತ್ತಾ ಹೋದರೆ ನಮ್ಮ ಕೈಗಳೂ ಕೆಂಪಾಗುತ್ತವೆ." ಆಗ "ನಾವೂ ಜೀವಿಯಲ್ಲ, ಬ್ರಹ್ಮನೇ" ಎಂಬ ವಿವೇಕ ನಮಗೆ ಬರುತ್ತದೆ. ನಮ್ಮ ಸಂಕೀರ್ಣತನ, ಸಣ್ಣತನ, ಹೀನತನ – ಎಲ್ಲವೂ ಹೊರಟುಹೋಗುತ್ತದೆ. ಎಲ್ಲ ದುಃಖದ ಮೂಲ "ನಾನು ಹೀನ" ಎಂಬ ಅಜ್ಞಾನದಲ್ಲಿದೆ. "ನಾನು ಮಹಾನ್" ಎಂಬ ಅರಿವೇ ಎಲ್ಲ ಆನಂದದ ಮೂಲ; ನಿಜವಾದ ಜ್ಞಾನ. ಈ ಅರಿವು ಬರುವುದು ಹೇಗೆ?

### ವಿದ್ಯೆಗಳ ಪುನರಾಗಮನ

ಉಪನಿಷತ್ತುಗಳಲ್ಲಿ 'ವಿದ್ಯಾ' ಎಂಬ ಶಬ್ದ ಪ್ರಚಲಿತವಾಗಿದೆ. **ಶಾಂಡಿಲ್ಯವಿದ್ಯಾ, ದಹರವಿದ್ಯಾ, ಮಧುವಿದ್ಯಾ** ಇತ್ಯಾದಿ ವಿದ್ಯೆಗಳನ್ನು ಉಪನಿಷತ್ತುಗಳಲ್ಲಿ ಕಾಣಬಹುದು. ಈ 'ವಿದ್ಯೆ' ಶಬ್ದದ ಸಾಧಾರಣ ಅರ್ಥ 'ಧ್ಯಾನ' ಎಂದು. ನಾನಾ ರೀತಿಯ ಧ್ಯಾನಗಳಿವೆ: ಸಾಧಾರಣವಾಗಿ ಭಕ್ತರು ಮಾಡುವ ಧ್ಯಾನವೆಂದರೆ ರೂಪಧ್ಯಾನ, ಭಗವದ್ರೂಪದ ಚಿಂತನೆ. ಹೀಗೆಯೇ ಭಗವಂತನ ಲೀಲೆಯ ಧ್ಯಾನ, ಗುಣಧ್ಯಾನ, ಮಾಧುರ್ಯಧ್ಯಾನ ಇತ್ಯಾದಿಗಳಿವೆ. ನಿರ್ಗುಣಬ್ರಹ್ಮನ ಉಪಾಸಕರು ಜ್ಯೋತಿಧ್ಯಾನ, ನಾಮಧ್ಯಾನ ಮುಂತಾದವನ್ನು ಅಭ್ಯಾಸ ಮಾಡುತ್ತಾರೆ. ಇತರರು ನಿರಾಕಾರಧ್ಯಾನ, ವಿಪಸ್ಸನ, ಜೆನ್ ಧ್ಯಾನ – ಇವುಗಳನ್ನು ಅಭ್ಯಾಸ ಮಾಡುತ್ತಿರಬಹುದು.

ಧ್ಯಾನಕ್ಕೆ ಬೇಕಾಗುವುದು ಮೂರು: 'ಧ್ಯಾನ ಮಾಡುವ ನಾನು', 'ಧ್ಯಾನ' ಮತ್ತು 'ಧ್ಯೇಯವಸ್ತು.' ಧ್ಯೇಯವಸ್ತು ಅತ್ಯಂತ ಕ್ಷುದ್ರವಾಗಿರಬಹುದು; ಆದರೆ ಅದು ಕೇವಲ ಒಂದು ಸಂಕೇತ. ಸಂಕೇತವನ್ನು ಚಿಂತಿಸಿ ಮೂಲವನ್ನು ಸೇರಬಹುದು. ಮೂಲ ಒಂದೇ – ಅದು ಬ್ರಹ್ಮವಸ್ತು, ಅನಂತವಸ್ತು; ಯಾವುದಕ್ಕೆ ಇತಿಮಿತಿ ಇಲ್ಲವೋ ಆ ನಮ್ಮ ನೈಜಸ್ವರೂಪ. ಸನಾತನಧರ್ಮ ಈಶ್ವರನನ್ನು ಸರ್ವವ್ಯಾಪಿ ಎನ್ನುತ್ತದೆ. ಈ ಸರ್ವವ್ಯಾಪಿ ಈಶ್ವರ ಎಲ್ಲೆಲ್ಲಿಯೂ ಇದ್ದಾನೆ – ಗಿರಿ, ಪರ್ವತ, ನದಿ, ನೆಲ, ಗಿಡಮರಗಳು – ಇವುಗಳಲ್ಲಿ ಪ್ರತಿಯೊಂದೂ ನಮ್ಮ ಧ್ಯಾನದ ಧ್ಯೇಯವಸ್ತುವಾಗಲು ಸಾಧ್ಯ.

ಶ್ರೀರಾಮಕೃಷ್ಣರು ಈ ಪದ್ಧತಿಯನ್ನೇ ಅನುಸರಿಸಿ ಈ ಜಗತ್ತಿಗೆ ನೂತನ ವಿದ್ಯೆಗಳನ್ನು ನೀಡಿದ್ದಾರೆ. ಈ ಸಹಜ, ಸರಳ, ಚಿಂತನೆಯಿಂದ, "ನಾನು ಕೇವಲ ಶರೀರವಲ್ಲ; ಶರೀರ ಮಣ್ಣಿನ ವಸ್ತುವಾದ್ದರಿಂದ ಮಣ್ಣಿಗೆ ಹಿಂತಿರುಗುತ್ತದೆ; ನಾನು ಕೇವಲ ಮನಸ್ಸು, ಬುದ್ಧಿಗಳಲ್ಲ. ಇವು ಕೂಡ ಸೂಕ್ಷ್ಮವಾದ ಮಣ್ಣು ಮಾತ್ರ; ನಾನು ಅನಂತ, ಅಸೀಮ ಆತ್ಮ" – ಇದನ್ನು ತಿಳಿಯುವುದೇ ನಮ್ಮ ಗುರಿ.

ಇದಕ್ಕೆ ಶ್ರೀರಾಮಕೃಷ್ಣರು ಕೊಡುವ ಒಂದು ಪುಟ್ಟ ಉದಾಹರಣೆ ಉಪ್ಪಿನ ಬೊಂಬೆಯದು. ಉಪ್ಪಿನ ಬೊಂಬೆಯೊಂದು ಒಮ್ಮೆ ಸಮುದ್ರದ ಆಳವನ್ನು ಅಳೆಯಲು ಹೋಯಿತಂತೆ. ಹಾಗೆ ಮಾಡಲು ಹೋಗಿ ಸಮುದ್ರವೇ ಆಯಿತಂತೆ. ಈ ಉದಾಹರಣೆ

ಬೃಹದಾರಣ್ಯಕ ಉಪನಿಷತ್ತಿನಲ್ಲಿದೆ: **'ಯಥಾ ಸೈಂಧವಘನಖಿಲಸ್ಯ ಉದಕೇ ಪ್ರಾಸ್ತ ಉದಕ ಏವ ಅನುಲೀಯತೇ'**. ಇದೊಂದು ಅದ್ವೈತ ವೇದಾಂತದ ವಿದ್ಯೆ. "ನಾನು ಯಾರು? ನಾನೊಂದು ಉಪ್ಪಿನ ಬೊಂಬೆ; ನಾನು ಮತ್ತು ಸಮುದ್ರ ಬೇರೆಯಲ್ಲ" ಇತ್ಯಾದಿ ಚಿಂತಿಸುವ ವಿದ್ಯೆ. ವಿದ್ಯೆ ಎಂದರೆ ಧ್ಯಾನ ಎಂದು ಹೇಳಿದೆವು. ಆದರೆ ಅದರ ಅರ್ಥ, ಕಣ್ಣುಮುಚ್ಚಿ ಕುಳಿತುಕೊಳ್ಳುವುದು ಎಂದೇನೂ ಅಲ್ಲ. ಈ ಬಗೆಯ ಧ್ಯಾನವನ್ನು ಅನವರತ ಮಾಡಬಹುದು. ಜೆನ್ ಬೌದ್ಧರ ಕೋಅನ್ ಪ್ರಶ್ನೆಯಂತೆ ಇದು ಕೆಲಸ ಮಾಡುವಾಗ, ನಡೆಯುವಾಗ, ಎಲ್ಲ ಸಮಯದಲ್ಲಿಯೂ ಸಚ್ಚಿಂತನೆ ಮಾಡುವ ಅವಕಾಶ ಮಾಡಿಕೊಡುತ್ತದೆ. ಶ್ರೀರಾಮಕೃಷ್ಣರ ಸಹಜ ಸರಳ ಉಪದೇಶಗಳು 'ವಿದ್ಯೆ'ಯ ಅರ್ಥಾತ್ ನಿರಂತರ ಚಿಂತನೆಯ ಕಾರ್ಯವೆಸಗಬಲ್ಲವು, ಆ ಮೂಲಕ ನಮ್ಮ ಮನಸ್ಸಿನ ಸಾಂಸಾರಿಕತೆಯನ್ನು ದೂರ ಮಾಡಿ ಅನವರತ ಆನಂದದ ಕಡೆಗೆ ನಮ್ಮನ್ನು ಒಯ್ಯಬಲ್ಲವು. ಅದು ಹೇಗೆ ಎಂಬುದನ್ನು ನೋಡೋಣ.

## 'ಮಣ್ಣೇ ಹೊನ್ನು, ಹೊನ್ನೇ ಮಣ್ಣು'

೧೮೬೪ ನೆಯ ಇಸವಿ. ಒಂದು ದಿನ ಶ್ರೀರಾಮಕೃಷ್ಣರು ದಕ್ಷಿಣೇಶ್ವರ ದೇವಾಲಯದ ಪಕ್ಕದಲ್ಲಿಯೇ ಹರಿಯುವ ಭಾಗೀರಥಿಯ ತೀರದಲ್ಲಿ ನಿಂತು, ಒಂದು ಹಿಡಿ ಮಣ್ಣು ಮತ್ತು ಒಂದು ನಾಣ್ಯವನ್ನು ತಮ್ಮೆರಡು ಕೈಗಳಲ್ಲಿ ತೆಗೆದುಕೊಂಡರು. ಈ ಎರಡನ್ನೂ ನೀರಿಗೆಸೆದು, "ಮಾಟಿ (ಮಣ್ಣು) ಟಾಕಾ (ಹಣ), ಟಾಕಾ (ಹಣ) ಮಾಟಿ (ಮಣ್ಣು)" ಎಂದರು. ಇದರರ್ಥ "ಹೊನ್ನೇ ಮಣ್ಣು, ಮಣ್ಣೇ ಹೊನ್ನು" ಎಂದು.

ಸಾಧಾರಣ ದೃಷ್ಟಿಯಿಂದ ನೋಡಿದರೆ ಇದೊಂದು ಉಪದೇಶ ಎಂದೇ ತೋರುವುದಿಲ್ಲ. ಶ್ರೀರಾಮಕೃಷ್ಣರು ಇದಕ್ಕೆ ವಿವರಣೆ ನೀಡುತ್ತಾ, ತಮ್ಮ ವ್ಯಕ್ತಿಗತ ವೈರಾಗ್ಯದ ವರ್ಧನೆಗಾಗಿ ಹೀಗೆ ಮಾಡಿದರೆಂದು ಹೇಳಿದ್ದಾರೆ. ಅವತಾರಗಳ ಜನ್ಮ, ಕರ್ಮ– ಎರಡೂ ಅದ್ಭುತವಾದುವು. ಹಾಗಾಗಿ, ಹಣ ಮತ್ತು ಮಣ್ಣನ್ನು ನೀರಿಗೆಸೆಯುವ ಈ ಪುಟ್ಟ ಘಟನೆಯಲ್ಲಿ ಅಗಾಧ ಅರ್ಥವಿದೆ. ಇಲ್ಲದೆ ಹೋದರೆ ಪ್ರತಿಯೊಂದು ಮನೆಯ ಪುಟ್ಟ ಪಾಪಚ್ಚಿಯೂ ಇದನ್ನು ನಿತ್ಯವೂ ಮಾಡುತ್ತದೆ. ಇದೇನು ಮಕ್ಕಳಾಟಿಕೆಯೇ? ಇದರ ಅರ್ಥವೇನು? ಹೀಗೆ ಚಿಂತನೆ ಮಾಡುವುದಕ್ಕೇ 'ವಿದ್ಯೆ' ಎಂದು ಹೆಸರು. ರಾಜಕೀಯದ ಹೊಲಸನ್ನು ಪತ್ರಿಕೆಗಳಲ್ಲಿ ಓದಿ, ದೂರದರ್ಶನದಲ್ಲಿ ಕಂಡು ಅದರ ಚಿಂತನೆಯನ್ನೇ ಮಾಡುತ್ತಿರುತ್ತೇವೆ. ಅದರಿಂದ ಯಾರಿಗೂ ಯಾವ ಉಪಕಾರವೂ ಆಗದೇ ಹೋದರೂ, ನಮ್ಮ ಮನಸ್ಸು ಮಾತ್ರ ಕಲುಷಿತವಾಗುತ್ತದೆ. ಮಕ್ಕಳ ಮನಸ್ಸು ನಿಷ್ಕಲ್ಮಷ ಮನಸ್ಸು. ಮಕ್ಕಳಿಗೆ ಹಣ, ಮಣ್ಣು – ಎಲ್ಲವೂ ಒಂದೇ. ಹಾಗಾಗಿ ಈ 'ಮಣ್ಣೇ ಹೊನ್ನು, ಹೊನ್ನೇ ಮಣ್ಣು' ಎಂಬ ಉಪದೇಶದ ಮೊದಲನೆಯ ಅರ್ಥವೆಂದರೆ "ಮಕ್ಕಳಂತೆ ನಾವು ಸರಳರಾಗಬೇಕು" ಎಂಬುದು.

ಎರಡನೆಯದಾಗಿ, ಈ ಚಿಕ್ಕ ಘಟನೆಯಲ್ಲಿ ನಾಲ್ಕು ವಸ್ತುಗಳಿವೆ. ಓರ್ವ ವ್ಯಕ್ತಿ (ಅವರು ಯಾರು ಬೇಕಾದರೂ ಆಗಬಹುದು), ಒಂದು ನಾಣ್ಯ, ಒಂದು ಹಿಡಿ ಮಣ್ಣು ಮತ್ತು ಒಂದು ನದಿ. ಇಲ್ಲಿ ಕೊನೆಯದಾದ ನದಿ ಕಾಲದ ಪ್ರತೀಕ. ಕಾಲ ಹೇಗೆ ಸಾಗುತ್ತಿರುತ್ತದೋ ಹಾಗೆಯೇ ನದಿಯ ಪ್ರವಾಹವೂ ಎಡೆಬಿಡದೆ ಸಾಗುತ್ತಿರುತ್ತದೆ. ಕಾಲ ಯಾರಿಗಾಗಿಯೂ ಕಾಯದೆ ನಿರಂತರವಾಗಿ ಹರಿಯುತ್ತಿರುತ್ತದೆ. ಈ ಕಾಲದ ಪ್ರವಾಹದಲ್ಲಿ ಯಾವುದೂ ಶಾಶ್ವತವಲ್ಲ. ಉದಾಹರಣೆಗೆ, ಮಣ್ಣು ನೀರಿನಲ್ಲಿ ಬಿದ್ದ ಕೂಡಲೇ ಅದು ತನ್ನ ನೈಜ ಸ್ವರೂಪವನ್ನು ಹೊಂದುತ್ತದೆ; ಅದೃಶ್ಯವಾಗಿಬಿಡುತ್ತದೆ. ನಾಣ್ಯ ಬಹಳ ದಿನ ನೀರಿನಲ್ಲಿದ್ದು, ಲೋಹವಾದ ಕಾರಣ ಕ್ರಮೇಣ ನಾಶವಾಗುತ್ತದೆ. ಆದರೆ ಕಾಲದ ಪ್ರವಾಹದ ಹೊರಗೆ ನಾಣ್ಯಕ್ಕಾಗಲಿ, ಮಣ್ಣಿಗಾಗಲಿ ಅರ್ಥವಿಲ್ಲ. ಲೋಹದ ನಾಣ್ಯ ಸಂಕೇತವಾಗಿದ್ದರೂ ಹಣ ಧನ ಸಂಪತ್ತುಗಳೆಂಬ 'ನಮ್ಮದು' ಎನ್ನುವುದು, ಕಾಲದ ಗರ್ಭದಲ್ಲಿ ಎಷ್ಟು ದಿನ ತಾನೇ ಇರಲು ಸಾಧ್ಯ? ಕಾಲವನ್ನು ಮೀರಿ ಹೋಗುವುದು ಎನ್ನುವುದು ದೂರದ ಮಾತು. 'ನಮ್ಮದು' ಎಂಬ ನಮ್ಮ ಸ್ವತ್ತು ನೀರಿನ ತಳದಲ್ಲಿ ಕುಳಿತ ನಾಣ್ಯದಂತೆ ಕಾಲದ ಗರ್ಭವನ್ನು ಸೇರುತ್ತದೆ. ಮಣ್ಣು, ನಾವು – ಇಬ್ಬರೂ ಒಂದೇ ವಸ್ತುವಿನಿಂದ ಮಾಡಲ್ಪಟ್ಟಿದ್ದೇವೆ. ಮಣ್ಣು ಉಪ್ಪಿನ ಬೊಂಬೆಯಂತೆ ನೀರಿನಲ್ಲಿ ಕರಗಿಹೋಗುತ್ತದೆ. ಆದರೆ "ನಾನು ಧಣಿ, ನಾನು ದೊಡ್ಡವನು" ಎಂಬ ಅಹಂಕಾರವಿದ್ದರೆ, ಲೋಹದ ನಾಣ್ಯದಂತೆ ಬಹಳ ಕಾಲ ನೀರಿನ ತಳದಲ್ಲಿ ಕಷ್ಟಪಡಬೇಕಾಗುತ್ತದೆ. ಹೀಗೆ ಶ್ರೀರಾಮಕೃಷ್ಣರ ಒಂದು ಪುಟ್ಟ ಉಪದೇಶವನ್ನು ಚಿಂತನೆ ಮಾಡಿದರೆ ಅದರ ನಾನಾ ಆಯಾಮಗಳನ್ನು ಆವಿಷ್ಕರಿಸಬಹುದು; ಹಾಗೆಯೇ ಆಧ್ಯಾತ್ಮಿಕ ಉನ್ನತಿಯನ್ನೂ ಪಡೆದುಕೊಳ್ಳಬಹುದು.

'ಹೊನ್ನು ಮಣ್ಣು' – ಈ ಬೋಧನೆ ಶ್ರೀರಾಮಕೃಷ್ಣರ ಪ್ರಧಾನ ಉಪದೇಶ. 'ಹೊನ್ನು' ಭೋಗದ, ಆಸಕ್ತಿಯ, ಪ್ರವೃತ್ತಿಯ ಸಂಕೇತ. 'ಹೊನ್ನು' ನಮ್ಮ ಮನಸ್ಸು ಮತ್ತು ಇಂದ್ರಿಯಗಳನ್ನು ಭೋಗಮಾರ್ಗದ ಕಡೆಗೆ ಕರೆದೊಯ್ಯುತ್ತದೆ. ಅದರಲ್ಲಿ ದೋಷವೇನು ಎಂದು ಕೇಳಬಹುದು. ಸಕಲರಿಗೂ ತಿಳಿದಿರುವಂತೆ ಭೋಗದಿಂದ ರೋಗ, ರೋಗದಿಂದ ಶೋಕ, ಶೋಕದಿಂದ ಅರ್ಥಹೀನ ಜೀವನ. ಭೋಗದ, ಸುಖದ ಹಿಂದೆ ಓಡಿದುದರ ಪರಿಣಾಮ ಶೋಕ! ಇತ್ತ 'ಮಣ್ಣು' ಯೋಗದ, ತ್ಯಾಗದ, ನಿವೃತ್ತಿಯ ಸಂಕೇತ. ಯಾವುದು ನಮಗೆ ಬೇಡವೋ ಅದನ್ನು ಬಿಡಬೇಕು. ನಮ್ಮ ಅವಶ್ಯಕತೆಗಳನ್ನು ಮೀರಿವೆ ನಮ್ಮ ಬೇಕುಗಳು. ಇದನ್ನು ನಿಯಂತ್ರಿಸುವುದೇ ತ್ಯಾಗ. ಎಷ್ಟಿದೆಯೋ ಅಷ್ಟರಲ್ಲಿ ತೃಪ್ತಿಪಡಬೇಕು. ತ್ಯಾಗದಿಂದ ನಮ್ಮ ನೈಜಸ್ವರೂಪದೆಡೆಗೆ ಮನಸ್ಸನ್ನು ತಿರುಗಿಸಬಹುದು ಎನ್ನುತ್ತಾರೆ ಅವರು.

ಶ್ರೀರಾಮಕೃಷ್ಣರ ಉಪದೇಶಗಳಲ್ಲಿ ನಮ್ಮ ಯೋಗ್ಯತೆಗೆ ಸರಿಹೊಂದುವಂತೆ ಜಪ, ಧ್ಯಾನ, ಅಧ್ಯಯನ, ಏಕಾಂತವಾಸ, ಪೂಜೆ, ಕೀರ್ತನೆ ಎಲ್ಲವೂ ಇವೆ. ಅವುಗಳೊಂದಿಗೆ ಈ 'ವಿದ್ಯೆ'ಗಳೂ ಇವೆ. ಇವು ಸಹಜ, ಸರಳ ಎನಿಸುವ ವಾಕ್ಯಗಳಿಂದ ಪರಮಾದ್ಭುತ ತತ್ತ್ವಗಳನ್ನು ತಿಳಿಸುತ್ತವೆ. 'ತಿಳಿಸುವುದು' ಎಂದರೆ ವಿವರಿಸುವುದಲ್ಲ. ನಮಗೆ ಒಂದು 'ಸೂತ್ರ'ದಂತಹ ವಾಕ್ಯವನ್ನು ನೀಡಲಾಗಿದೆ.

ಯಾವಾಗ ಸಮಯವಿದೆಯೋ ಆಗ ನಾವು ಆ 'ಸೂತ್ರ'ದ ಬಗ್ಗೆ ಚಿಂತಿಸುತ್ತೇವೆ. ಆಗ ವಿನೂತನ ಭಾವಗಳು ಆಂತರ್ಯದಿಂದ ಹೂವುಗಳಂತೆ ಅರಳುತ್ತವೆ. ಪುಸ್ತಕವನ್ನು ಓದಿದರೆ ಮಾತ್ರವೇ ಜ್ಞಾನ ಬರುತ್ತದೆ; ಅಂದರೆ ಹೊರಗಿಂದ ಒಳಗೆ ಜ್ಞಾನದ ಪ್ರವೇಶ ಎಂಬುದು ವಿದೇಶಿ ಭಾವನೆ. ಎಲ್ಲ ಜ್ಞಾನವೂ ಒಳಗೇ ಇದೆ; ಭಗವಂತನೂ ಒಳಗೆ ಇದ್ದಾನೆ; ನಮಗೆ ಜ್ಞಾನ ನೀಡಲು ಅವನು ಕಾದಿದ್ದಾನೆ – ಅಂದರೆ ಎಲ್ಲವೂ 'ಒಳಗಿನಿಂದ ಹೊರಗೆ' ಎಂಬುದು ಭಾರತೀಯ ಭಾವನೆ.

'ಮಣ್ಣೇ ಹೊನ್ನು; ಹೊನ್ನೇ ಮಣ್ಣು' ಎಂಬ ಒಂದು ಪುಟ್ಟ ವಾಕ್ಯದಲ್ಲಿ ಜೋಸೆಫ್ ಕ್ಯಾಂಪ್‌ಬೆಲ್ ಹೇಳುವ 'ಮಿಥ್'(Myth) ತತ್ತ್ವ ಅಡಗಿದೆ; ಸಿಂಬಾಲಜಿ (Symbology) ಎಂಬ ನಿಗೂಢ ತತ್ತ್ವ ಅಡಗಿದೆ; 'ಸಮಾನತೆ'ಯ ತತ್ತ್ವ ಅಡಗಿದೆ. ಸಮಾನತೆ ಎಂದರೇನು? ನೋಡಲು ವಸ್ತುಗಳು ಭಿನ್ನ ಭಿನ್ನ. ಒಂದು ಹಿಡಿ ಮಣ್ಣು ಬೇರೆ, ಒಂದು ನಾಣ್ಯ ಬೇರೆ. ಒಂದು ಮೂಟೆ ಮಣ್ಣಿನ ಬೆಲೆಯೇ ಬೇರೆ, ಒಂದು ಮೂಟೆ ನಾಣ್ಯಗಳ ಬೆಲೆಯೇ ಬೇರೆ. ಆದರೆ ಅವುಗಳನ್ನು "ಎರಡೂ ಒಂದೇ" ಎಂದು ನೀರಿನಲ್ಲಿ ಬಿಟ್ಟುಬಿಡುವುದರ ಅರ್ಥ ಎರಡೂ ಒಂದೇ ಎಂದು. **'ಆದೌ ಅಂತೇ ಚ ಯತ್ ನಾಸ್ತಿ, ವರ್ತಮಾನೇಽಪಿ ತದ್ಯಥಾ** – "ಆದಿಯಲ್ಲಿ ಮತ್ತು ಅಂತ್ಯದಲ್ಲಿ ಯಾವುದು ಇರುವುದಿಲ್ಲವೋ, ವರ್ತಮಾನದಲ್ಲಿ ಕೂಡ ಅದು ನಿಜವಾಗಿಯೂ ಇರುವುದಿಲ್ಲ." ಅಂದರೆ ಯಾವುದೇ ಪ್ರಾಪಂಚಿಕ ವಸ್ತು ಈಗ ಆಕಾರ ತೆಗೆದುಕೊಂಡಿದೆ, ಅಷ್ಟೇ. ಅದು ಹಿಂದೆ ಇರಲಿಲ್ಲ, ಮುಂದೆ ಇರುವುದೂ ಇಲ್ಲ. ಅದರರ್ಥ ಈಗಲೂ ಅದಕ್ಕೆ ಬೆಲೆಯಿಲ್ಲ ಎಂದೇ.

### ಭಾಗವತ, ಭಕ್ತ, ಭಗವಾನ್

ಒಮ್ಮೆ ಶ್ರೀರಾಮಕೃಷ್ಣರು ಒಂದು ದರ್ಶನವನ್ನು ಕಂಡರು. ಒಂದು ದಿವ್ಯಜ್ಯೋತಿ ದೇವರ ಪಟವನ್ನು, ಭಾಗವತ ಗ್ರಂಥವನ್ನು ಮತ್ತು ಸ್ವತಃ ಅವರನ್ನು ಸ್ಪರ್ಶಿಸಿತು. ಈ ದರ್ಶನದ ಆಧಾರದ ಮೇಲೆಯೇ ಶ್ರೀರಾಮಕೃಷ್ಣರು ಅನೇಕ ಸಾರಿ ಭಾಗವತ, ಭಕ್ತ, ಭಗವಾನ್ – ಇವು ಮೂರೂ ಒಂದೇ ಎಂದು ಉಪದೇಶಿಸುತ್ತಾರೆ. ಈ ಉಪದೇಶವನ್ನೂ ನಾವು ಒಂದು ಬಗೆಯ 'ವಿದ್ಯೆ' ಎಂದು ಭಾವಿಸಬಹುದು. ಭಾಗವತ ಒಂದು ಗ್ರಂಥ. ಈ ಗ್ರಂಥ ಹೇಗೆ ಭಕ್ತನಿಗೆ ಸಮಾನವಾಗಬಲ್ಲುದು? ಭಾಗವತ ಮತ್ತು ಭಕ್ತ – ಈ ಎರಡೂ ಹೇಗೆ ಭಗವಂತನೊಡನೆ ಸಮಾನವಾಗಬಹುದು? ಈ ರೀತಿಯ ಚಿಂತನೆ ಮಾಡುವಾಗ ಆ ಭಕ್ತ ಬೇರಾರೂ ಅಲ್ಲ, 'ನಾನೇ' ಎಂದು ಚಿಂತಿಸಿದರೆ ಇನ್ನೂ ಹೆಚ್ಚಿನ ಪರಿಣಾಮವಾಗಬಹುದು. 'ನಾನು' ಮತ್ತು 'ಭಗವಂತ' ಹೇಗೆ ಒಂದಾಗಿರಲು ಸಾಧ್ಯ?

ಒಂದೆರಡು ಉದಾಹರಣೆಗಳನ್ನು ನೀಡಬಹುದು. ಎಲ್ಲವೂ ಭಗವಂತನೇ, ಈಶ್ವರನೇ. ನಾವು ಈ ಜಗತ್ತಿನಲ್ಲಿ ಅನೇಕ ರೀತಿಯ ವೈಚಿತ್ರ್ಯಗಳನ್ನು ನೋಡುತ್ತೇವೆ, ನಿಜ. ಆದರೆ ಇದೆಲ್ಲ ಈಶ್ವರನೇ. ಹಾಗಾಗಿ ಈ ಉಪದೇಶ ಸರಿಯಾಗಿಯೇ ಇದೆ. ಮತ್ತೊಂದು ದೃಷ್ಟಿಯಿಂದ **ಈಶ್ವರ, ಜೀವ** ಮತ್ತು **ಗ್ರಂಥ** ವ್ಯಾವಹಾರಿಕ ದೃಷ್ಟಿಯಿಂದ ಕ್ರಮವಾಗಿ **'ಅವತಾರ'**ವಾಗುತ್ತದೆ; **'ನಾನು'** ಆಗುತ್ತದೆ. **'ಪುಸ್ತಕ'**ವಾಗುತ್ತದೆ. ಹೀಗೆ ಜನ್ಮತಳೆದು ಒಂದು ದಿನ ಇವು ಮೂರೂ ತಮ್ಮ ನೈಜ ಸ್ಥಿತಿಗೆ ತೆರಳಲೇಬೇಕು. ಇದರಿಂದ ಈಗ ಬೇರೆ ರೂಪಗಳಲ್ಲಿದ್ದರೂ ಮೂಲತಃ ಈ ಮೂರೂ ಅನಾದಿ, ಅನಂತ ಎನ್ನುವುದು ಗೊತ್ತಾಗುತ್ತದೆ. ಹಾಗೆಂದರೇನು? ನಮ್ಮ ಇಂದಿನ ಸೀಮಿತವಾದ ದೃಷ್ಟಿಯಿಂದ 'ಭಗವಂತ ಬೇರೆ', 'ಪುಸ್ತಕ ಬೇರೆ' ಮತ್ತು 'ನಾನು ಬೇರೆ'. ಆದರೆ ಪಾರಮಾರ್ಥಿಕ ದೃಷ್ಟಿಯಿಂದ ಇವು ಮೂರೂ ಒಂದೇ. ಗ್ರಂಥದಲ್ಲಿರುವುದು ಭಗವಂತನ ಗುಣಗಾನ, ಭಕ್ತರ ಗುಣಗಾನ; ಭಕ್ತನಲ್ಲಿ ಇರುವುದು ಭಗವಂತನೇ, ಭಗವಂತನಲ್ಲಿ ಇರುವುದೂ ಭಕ್ತನೇ – ಈ ರೀತಿಯಿಂದಲೂ ಮೂರೂ ಒಂದೇ ಎಂದು ಪರಿಗಣಿಸಬಹುದು. ನಾವು ಭಗವಂತನ ಚಿಂತನೆ ಮಾಡುವಾಗ ಸಂಪೂರ್ಣವಾಗಿ ಅವನೇ ಆಗಿಬಿಡಬೇಕು ಎಂಬುದು ಮತ್ತೊಂದು ದಿಕ್ಕಿನಿಂದ ಇದೇ ಸತ್ಯವನ್ನು ಹೇಳುವ ರೀತಿ. ಶ್ರೀರಾಮಕೃಷ್ಣರು ಈ ಮೂಲಕ ಅದ್ವೈತ, ದ್ವೈತ, ವಿಶಿಷ್ಟಾದ್ವೈತ – ಹೀಗೆ ಬೇರೆ ಬೇರೆ ದೃಷ್ಟಿಗಳಿಂದ ಪರಮಸತ್ಯವನ್ನು ಒಂದೇ ಮನೋಭಾವದಿಂದ ನೋಡುತ್ತಾರೆ. ಅರ್ಥಾತ್, 'ಭಾಗವತ, ಭಕ್ತ, ಭಗವಂತ' – ಗ್ರಂಥ, ಭಕ್ತ ಮತ್ತು ತತ್ತ್ವ – ಈ ಮೂರೂ ಒಂದೇ. ಈ ಶಬ್ದಗಳ ಮತ್ತು ಅವುಗಳ ಅರ್ಥಗಳ ಮೂಲವಸ್ತು ಬೇರೆ ಬೇರೆಯಲ್ಲ, ಒಂದೇ. ಪರತತ್ತ್ವದಲ್ಲಿ ಸೀಮಿತ, ಸೀಮಾತೀತ ಎಂಬ ಭೇದವಿಲ್ಲ, ಎಲ್ಲವೂ ಒಂದೇ. ಭಕ್ತರು **'ಸರ್ವಂ ಕೃಷ್ಣಮಯಂ'** (ಎಲ್ಲವೂ ಶ್ರೀಕೃಷ್ಣನೇ) ಎನ್ನುತ್ತಾರೆ. ಜ್ಞಾನಿಗಳು **'ಏಕಮೇವಾದ್ವಿತೀಯಮ್'** (ಅದ್ವಿತೀಯವೂ ಏಕವೂ ಆದ ಪರವಸ್ತು) ಎನ್ನುತ್ತಾರೆ. ಯೋಗಿಗಳು **'ಸರ್ವಂ ಪುರುಷಾರ್ಥಂ'** (ಎಲ್ಲವೂ ಪುರುಷನಿಗೋಸ್ಕರವೇ) ಎನ್ನುತ್ತಾರೆ. ಮತ್ತು ಕರ್ಮಯೋಗಿಗಳು **'ಕರ್ಮಣಿ ಅಕರ್ಮ ಯಃ ಪಶ್ಯೇದ್, ಅಕರ್ಮಣಿ ಚ ಕರ್ಮ ಯಃ'** (ಕರ್ಮದಲ್ಲಿ ಅಕರ್ಮವನ್ನೂ, ಅಕರ್ಮದಲ್ಲಿ ಕರ್ಮವನ್ನು ನೋಡಬೇಕು) ಎನ್ನುತ್ತಾರೆ. ಇವುಗಳೆಲ್ಲದರ ಹಿನ್ನೆಲೆಯೂ ಒಂದೇ.

ಸಣ್ಣದೊಂದು ವಾಕ್ಯದ ಮೂಲಕ ಶ್ರೀರಾಮಕೃಷ್ಣರು ಎಷ್ಟೆಲ್ಲಾ ಉಪದೇಶ ಮಾಡಿದ್ದಾರೆ ಎಂದು ನೋಡಿದೆವು. ಆದರೆ ನಮಗೆ ಇದರಿಂದ ಆಗುವ ಉಪಯೋಗವೇನು? ದೈನಂದಿನ ಜೀವನದಲ್ಲಿ ಭೇದವನ್ನು ನೋಡಿ ನೋಡಿ ಪ್ರತಿಯೊಂದು ವಸ್ತು, ವಿಷಯ ದಲ್ಲೂ ಭೇದ ನೋಡುವ, ಸಂಕುಚಿತ ದೃಷ್ಟಿ ತಾಳುವ ಕಲೆ ನಮಗೆ ರಕ್ತಗತವಾಗಿ ಹೋಗಿದೆ. "ಗುರುಗಳು ಹೇಳಿದ್ದಾರೆ" ಎಂದು ಕೆಲವು ನಿಮಿಷಗಳ ಕಾಲ ಜಪಧ್ಯಾನ ಮಾಡುವುದರ ಹೊರತಾಗಿ ದೈನಂದಿನ ಜೀವನದಲ್ಲಿ ಆಧ್ಯಾತ್ಮಿಕತೆಯನ್ನು ಅಭ್ಯಾಸ ಮಾಡುವ ಅವಕಾಶವೇ ನಮಗಿಲ್ಲ. ಇಚ್ಛೆಯಿದ್ದರೂ 'ಆಧ್ಯಾತ್ಮಿಕ ಜೀವನ' ಎಂದರೆ ಧ್ಯಾನ ಮಾಡಲೇಬೇಕು, ಪೂಜೆ ಮಾಡಲೇಬೇಕು, ಮಂದಿರಕ್ಕೆ ಹೋಗಲೇಬೇಕು ಇತ್ಯಾದಿ ಕಲ್ಪನೆಗಳನ್ನು ಇಟ್ಟುಕೊಂಡಿದ್ದೇವೆ. ಯಾರು ಒಂದು ನಿಮಿಷ ಧ್ಯಾನ ಮಾಡಿ ದಿನವೆಲ್ಲ ಭೇದಬುದ್ಧಿ ಮತ್ತು